ಅಭಿಪ್ರಾಯಗಳು ಬರಲಿಕ್ಕೆ ಸಾಕು. ಯಾವುದೇ ಒಂದು ವಿಚಾರವಾಗಲಿ, ಎರಡು ಪ್ರಾಮಾಣಿಕವಾದಂಥ ಅನಿಸಿಕೆಗಳು, ಅಭಿಪ್ರಾಯಗಳು ಬರುವುದಕ್ಕೆ ಅವಕಾಶವಿದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಈಗ Distribution of Budget papers ಬಗ್ಗೆ Kaul and Shakder ಅವರು ಏನು ಹೇಳಿದ್ದಾರೆ ಎನ್ನತಕ್ಕಂಥಾದ್ದನ್ನು ಓದೋಣ.

(ಈ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಕೆಲವರು ಗದ್ದಲ ಮಾಡುತ್ತಾ 'ಡಿ.ಎಸ್.ಎಸ್. ಜಿಂದಾಬಾದ್' ಎಂದು ಕೂಗುತ್ತಾ ಕರಪತ್ರಗಳನ್ನು ಎಸೆದರು)

I quote from Page 630.

"Distribution of budget papers: Sets of budget papers for circulation to Members are supplied to the Secretariats of both the Houses of Parliament by the Ministry concerned. In the case of the Railway Budget, the sets of Budget papers are entrusted to the Secrtetariat by the Railway Ministry as soon as the Railway Minister starts his Budget Speech and the sets are distributed to the Members from the Publication counter after the Minister has concluded his speech. The General Budget is kept a carefully guarded secret because Part-B of the Finance Minister's Speech contains Taxation proposals and the Ministry of Finance entrusts the sets to the Secretariat only when the Finance Minister starts Part-B of his speech. The sets are distributed to the Members from the Inner and Outer Lobbies of the Chamber, after the Minister's Speech is over, the Finance Bill introduced and the House is adjourned for the day."

This is the Parliamentary practice in so far as the distribution of budget papers are concerned.

Then the practice that is prevailing in this august House even before I assumed the office of the Speaker is that half an hour before.ಈ ಆಯವ್ಯಯದ ಮುಂಗಡ ಪ್ರತಿಗಳು ನನ್ನ ಸೆಕ್ರೆಟರಿಯಟ್‌ಗೆ ಮಿತ್ತ ಕಾರ್ಯಾಲಯದಿಂದ ಬರುತ್ತವೆ. ಆನಂತರ, ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣವನ್ನು ಓದಲು ಪ್ರಾರಂಭ ಮಾಡಿದ ತಕ್ಷಣ ಆ ಪ್ರತಿಗಳನ್ನು ಹಂಚತಕ್ಕ ಸಂಪ್ರದಾಯವನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಆದುದರಿಂದ, ಸದನದ ಮಾನ್ಯ ಸದಸ್ಯರು ದಯವಿಟ್ಟು ಪರಿಗಣಿಸಬೇಕು. ಲೋಕಸಭೆಯಲ್ಲಿರತಕ್ಕಂಥ ಪ್ರಾಕ್ಟಿಸ್‌ಗೂ, ನಮ್ಮ ಸದನದಲ್ಲಿರತಕ್ಕಂಥ ಪ್ರಾಕ್ಟಿಸ್‌ಗೂ ಸ್ವಲ್ಪ ವ್ಯತ್ಯಾಸಗಳಿವೆ. ಮಾನ್ಯ ಶ್ರೀ ಕೆ.ಎಚ್. ರಂಗನಾಥರವರು ಮತ್ತು ಶ್ರೀ ಡಿ.ಬಿ. ಚಂದ್ರೇಗೌಡರು ಈ ಸ್ಥಾನದಲ್ಲಿ ಕುಳಿತಿದ್ದರು. ಈ ವ್ಯತ್ಯಾಗಳನ್ನು ಯಾರೂ ಅರ್ಥ ಮಾಡಿಕೊಳ್ಳದಿದ್ದರೂ ಇವರಿಬ್ಬರೂ ಅರ್ಥಮಾಡಿಕೊಳ್ಳುತ್ತಾರೆನ್ನುವ ವಿಶ್ವಾಸ ನನಗೆ ಇದೆ. ಇನ್ನು ನಾನು ಈ ಸಭೆಯನ್ನು ಪ್ರಾರಂಭ ಮಾಡುವುದಕ್ಕೆ ಯಾರೋ ಹೇಳಿದ್ದರು. ನನ್ನನ್ನು ಕರೆದಿದ್ದರು. ಅಥವಾ ಕರೆಯಲಿಲ್ಲ ಎನ್ನುವ ಜಿಜ್ಞಾಸೆ ಇದೆ. ಸದನದ ನಡವಳಿಕೆಯ ಟ್ರಾನ್‌ಸ್ಕ್ರಿಪ್ಟ್ ನನ್ನ ಹತ್ತಿರವಿದೆ. ಹಾಗೂ ಧ್ವನಿವರ್ಧಕದ ರೆಕಾರ್ಡಿಂಗ್ ಇದೆ. ರೆಕಾರ್ಡ್‌ನಲ್ಲಿ ಈ ರೀತಿ ಇದೆ. "ಸಭೆ ಮಧ್ಯಾಹ್ನ 2 ಗಂಟೆಗೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಉಪಸ್ಥಿತರಿದ್ದರು.

ಶ್ರೀ ಕೆ.ಎಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, 2 ಗಂಟೆಗೆ ಬಜೆಟ್ ಇಲ್ಲಿ ಮಂಡನೆಯಾಗಬೇಕು."

ಶ್ರೀ ವಾಟಾಳ್ ನಾಗರಾಜ್: ಮಾನ್ಯ.....,

ಶ್ರೀ ಕೆ.ಎಚ್. ರಂಗನಾಥ್:.....

ಆದುದರಿಂದ ಸಭೆಯ ಅಧಿಕೃತ ರೆಕಾರ್ಡಿಂಗ್ ಪ್ರಕಾರ ನಾನು ಇನ್ನೂ ಅರ್ಥಮಂತ್ರಿಗಳನ್ನು ಕರೆದಿಲ್ಲ. ಈಗ ನಮ್ಮ ಕಾರ್ಯಾಲಯಕ್ಕೆ ಹಣಕಾಸು ಇಲಾಖೆಯಿಂದ 600 ಬಜೆಟ್ ಪ್ರತಿಗಳು ಬಂದಿವೆ. ಆ 600 ಬಜೆಟ್ ಪ್ರತಿಗಳಲ್ಲಿ 500 ಬಜೆಟ್ ಪ್ರತಿಗಳು ಈಗ ನಮ್ಮಲ್ಲಿ ಉಂಟು. 100 ಬಜೆಟ್ ಪ್ರತಿಗಳನ್ನು ಮೇಲ್ಮನೆಗೆ ಕಳುಹಿಸಿಕೊಡಲಾಗಿದೆ. ಅದನ್ನು ಮತ್ತೆ ಇಲ್ಲಿಗೆ ತರಿಸಿಕೊಳ್ಳಲಾಗಿದ. ಆದುದರಿಂದ, ನಾನು ನನ್ನ ಕಾರ್ಯಾಲಯದ ಪರವಾಗಿ ಸ್ಪಷ್ಟಗೊಳಿಸುತ್ತೇನೆ, ಮತ್ತೆ ಸ್ಪಷ್ಟಗೊಳಿಸುತ್ತೇನೆ. ಇದಕ್ಕೆ ಅನುಮಾನ ಬೇಕಾಗಿಲ್ಲ. 600 ಬಜೆಟ್ ಪ್ರತಿಗಳು ಈಗ ನನ್ನಲ್ಲಿದೆ. ಇದನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಆದರೆ, ಈಗ ನನ್ನ ಕೈಗೆ ಸಿಕ್ಕಿರತಕ್ಕಂಥ ಪ್ರತಿಯ